# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6th Floor,
Kaveri Bhavan,
Bangalore-560009.

ಸಂಖ್ಯೆ: ಕೆಇಪಿಜಿಟಿ/ಕೆಸಿಒ123/ಪಿ19/2020-21/ಸಿ ಸ-01 ದಿನಾಂಕ: 20 MAY 2020

'ತುರ್ತು'

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ),
   ಬೆವಿಕಂ.
2. ಮುಖ್ಯ ಆರ್ಥಿಕ ಅಧಿಕಾರಿ,
   ಗುವಿಕಂ/ಹುವಿಕಂ/ಮವಿಕಂ/ಚಾವಿಸನಿ
3. ಆರ್ಥಿಕ ಸಲಹೆಗಾರರು(ಲೆ & ಸಂ),
   ಕವಿಪ್ರನಿನಿ.

ಮಾನ್ಯರೇ,

ವಿಷಯ: ಪಿಂಚಣಿ ಪಾವತಿ ನಿರ್ವಹಣಾ ವ್ಯವಸ್ಥೆ(PPMS) ತಂತ್ರಾಂಶದ Databaseನಲ್ಲಿ ಮೊಬೈಲ್ ಸಂಖ್ಯೆಯನ್ನು ತುರ್ತಾಗಿ Update ಮಾಡುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2017-18/ಸಿವೈಎಸ್-9 ದಿನಾಂಕ 07.02.2018.

*********

ಉಲ್ಲೇಖದಲ್ಲಿನ ಸುತ್ತೋಲೆಯಲ್ಲಿ, ಪಿಂಚಣಿ/ಕುಟುಂಬ ಪಿಂಚಣಿ ಬಟವಾಡೆ ಲೆಕ್ಕಘಟಕಗಳು ಪಿಂಚಣಿ/ಕುಟುಂಬ ಪಿಂಚಣಿದಾರರ ವಿಳಾಸ, ಇ-ಮೇಲ್ ಮತ್ತು ದೂರವಾಣಿ/ಮೊಬೈಲ್‌ಗಳ ಮಾಹಿತಿಗಳನ್ನು ಕ್ರೋಢೀಕರಿಸಿ ಡಾಟಾಬೇಸ್ ನಿರ್ವಹಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿರುವ ಅಂಶದ ಕಡೆ ತಮ್ಮ ಗಮನ ಕೋರಿದೆ.

ಆದರೆ, ಹಲವಾರು ಪಿಂಚಣಿ ಬಟವಾಡೆ ಲೆಕ್ಕಘಟಕಗಳು ಪಿಂಚಣಿ/ಕುಟುಂಬ ಪಿಂಚಣಿದಾರರ ಮೊಬೈಲ್ ಸಂಖ್ಯೆಗಳನ್ನು ಪಿಂಚಣಿ ಪಾವತಿ ನಿರ್ವಹಣಾ ವ್ಯವಸ್ಥೆ(PPMS) ತಂತ್ರಾಂಶದ Databaseನಲ್ಲಿ ನಮೂದಿಸದೇ ಇರುವುದನ್ನು ಗಮನಿಸಲಾಗಿದೆ.

ಜೀವಿತ/ಮರು ಮದುವೆ ಪ್ರಮಾಣ ಪತ್ರಗಳನ್ನು ಮೊಬೈಲ್ App ಮೂಲಕ ಪಡೆಯುವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು, ಇದಕ್ಕೆ ಮೊಬೈಲ್ ಸಂಖ್ಯೆಯು ಅತ್ಯವಶ್ಯವಾಗಿರುತ್ತದೆ. ಆದ್ದರಿಂದ, **ಮೊದಲನೆಯದಾಗಿ ಹಾಗೂ ಆದ್ಯತೆ ಮೇರೆಗೆ** ಪಿಂಚಣಿ/ಕುಟುಂಬ ಪಿಂಚಣಿದಾರರಿಂದ ಮೊಬೈಲ್ ಸಂಖ್ಯೆಯನ್ನು ಪಡೆದು PPMS ತಂತ್ರಾಂಶದ Databaseನಲ್ಲಿ ಅತೀ ಜರೂರು Update ಮಾಡಲು ತಮ್ಮ ವ್ಯಾಪ್ತಿಯ ಎಲ್ಲಾ ಪಿಂಚಣಿ ಬಟವಾಡೆ ಲೆಕ್ಕಘಟಕಗಳ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು(ಪಿಂ & ಉ ಟ್ರಸ್ಟ್)
20/5/2020

ಪ್ರತಿ:

1. ಎಲ್ಲಾ ವಿಸಕಂಗಳ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಲಯ.
2. ಎಲ್ಲಾ ವಿಸಕಂಗಳ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ.
3. ಎಲ್ಲಾ ವಿಸಕಂಗಳ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ/ಆಂತರಿಕ ತನಿಖೆ.